SA – 412

# ಎರಡನೇ ಸೆಮಿಸ್ಟರ್ ಬಿ.ಎಸ್ಸಿ.(ಎಫ್.ಎ.ಡಿ) ಪರೀಕ್ಷೆ, ಎಪ್ರಿಲ್/ಮೇ 2015
## (ರಿಪೀಟರ್ಸ್) (2011-12 and Onwards)
## ಕನ್ನಡ ಭಾಷಾ ಪತ್ರಿಕೆ - II
## ಸಾಹಿತ್ಯ ಸಲ್ಲಾಪ - I

Time : 3 Hours Max. Marks : 100

I. 1) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ಆ ಷಾಕಟಾಂಗನೊಳಂತಾ
ದೇವಿಗೆ ರುಚಿಮಾಗೆ ರತಿಫಲಾಸ್ವಾದನದೊಳ್
ಬೇವಂ ಮೆಚ್ಚಿದ ಕಾಗೆಗೆ
ಮಾವಿಳಿದಪ್ಪಂತೆ ಪತಿಯೊಳಿಳಿವಾಯ್ತು ಮನಂ

2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ಜನ್ನ, ವೈದೇಹಿ, ಆಮ್ರಪಾಲಿ, ಜಿ.ಎಸ್.ಎಸ್.

II. 1) **ಐದು** ಪದಗಳಿಗೆ ಮೂಲ ರೂಪ ಬರೆಯಿರಿ : **(5×1=5)**

ನಾಕು, ಸಿವಸಿವಾ, ಇರುಪಾಕ್ಷಿ, ಸೆಗಣಿ, ಯಾಪಾರ, ಬ್ಯಾಂಕು, ಅಚ್ಚರಿ.

2) **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ಬಿನವ, ಹರಿಣಿ, ದೂತಿ, ಧೃತಿ, ಮೇದಿನಿ, ಬೆಡಗು, ನೇಹ

3) **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**

ಗಾಳಿಯನ್ನು, ಚಂದ್ರೋದಯ, ಅರಮನೆ, ಕರಿದೊಗಲು, ತಲೆಯೆತ್ತು, ಬಿಳಿಯುಡುಗೆ, ಊರುಗೋಲು.

4) ಚಂದ್ರಮುಖಿ, ರಾಷ್ಟ್ರಪತಿ – ಇದೇ ರೀತಿಯ ಐದು ಪದಗಳನ್ನು ಸ್ವಂತವಾಗಿ ರಚಿಸಿ. **(5×1=5)**

III. **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) ತಡವಾದುದಕ್ಕೆ ಅಮೃತಮತಿ ಕೊಟ್ಟ ಕಾರಣವೇನು ?
2) ಇರುಪಾಕ್ಷಿ ಇದ್ದಕ್ಕಿದ್ದಂತೆ ಕಾಣೆಯಾಗಿದ್ದನ್ನು ವಿವರಿಸಿ.
3) ಜಾತ್ರೆಯಲ್ಲಿಯ ಎತ್ತಿನ ವ್ಯಾಪಾರವನ್ನು ಕುರಿತು ಬರೆಯಿರಿ.
4) ಜ್ಯೋತಿಷ್ಯ ಶಾಸ್ತ್ರದ ಪುರಾತನತೆಯನ್ನು ಕುರಿತು ಲೇಖಕರ ಅಭಿಪ್ರಾಯವೇನು ?
5) ಹೋಳಿ ಹಬ್ಬದ ವಿಶಿಷ್ಟತೆಯನ್ನು ತಿಳಿಸಿರಿ.
6) ಅಜಾತ ಶತ್ರು ಯಾರು ? ಅವನು ನಿರ್ಧರಿಸಿದ್ದೇನು ?

IV. ವಿವರವಾಗಿ ಉತ್ತರ ಬರೆಯಿರಿ : **(4×12=48)**

1) ''ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ'' – ಈ ಮಾತನ್ನು ಜನ್ನನ ಕಾವ್ಯ ಭಾಗದ ಹಿನ್ನೆಲೆಯಲ್ಲಿ ಚರ್ಚಿಸಿರಿ.

**ಅಥವಾ**

ಷರೀಫರ ದೈವ ಸಿದ್ಧಾಂತವನ್ನು 'ಗುಡಿಯ ನೋಡಿರಣ್ಣ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) ಎಲುಗ ಹಾಗೂ ಚವುಡನ ಸಂಬಂಧವನ್ನು ಕುರಿತು ಬರೆಯಿರಿ.

**ಅಥವಾ**

ಲೇಖಕರು ತೋಟದಲ್ಲಿ ತೆಂಗಿನ ಕಾಯಿ, ಮಾವಿನಕಾಯಿ ಕಿತ್ತಂತಹ ಪ್ರಸಂಗವನ್ನು ವಿವರಿಸಿ.

3) ಆಧುನಿಕ ಸಮಾಜದಲ್ಲಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವ ಜ್ಯೋತಿಷ್ಯದ ಬಗ್ಗೆ ನಿಮ್ಮ ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

**ಅಥವಾ**

ಪ್ರೀತಿಯೊಂದು ಮಹಾಶಕ್ತಿ ! ಹೇಗೆ ? ನಿಮ್ಮ ಪಠ್ಯದ ಮೂಲಕ ಚರ್ಚಿಸಿರಿ.

4) ಅರಮನೆಯನ್ನು ಬಿಟ್ಟ ಸಿದ್ಧಾರ್ಥ ಮತ್ತೆ ಪ್ರೀತಿಯನ್ನರಸಿ ಜನರತ್ತ ಹೋದ ಪ್ರಸಂಗವನ್ನು ಚರ್ಚಿಸಿರಿ.

**ಅಥವಾ**

ಅಜಾತಶತ್ರು, ವಿಧವೆ, ಆಮ್ರಪಾಲಿ – ಇವರಲ್ಲಿ ಎರಡು ಪಾತ್ರಗಳನ್ನು ಪರಿಚಯಿಸಿ.